ಸ್ವಾಮಿ ವಿವೇಕಾನಂದರು ಅವರನ್ನು **'ಕರ್ಮಕಠೋರ್'** – ಕರ್ಮವೀರರನ್ನಾಗಿ ಕಾಣುತ್ತಾರೆ. ಶ್ರೀರಾಮಕೃಷ್ಣರೂ ಅವರ ಬೋಧನೆಗಳಲ್ಲಿ ಶ್ರೀಕೃಷ್ಣನು ಎತ್ತಿಹಿಡಿದ ಸಾಮರಸ್ಯದ ಪ್ರತಿಪಾದನೆಯನ್ನೇ ಮಾಡುತ್ತಾರೆ. ಯಾವ ಸಂಕೀರ್ಣ ತಾತ್ತ್ವಿಕ ಜಿಜ್ಞಾಸೆಗೂ ಹೋಗದೆ, ಅನುಷ್ಠಾನಪ್ರದ ಪ್ರಾಯೋಗಿಕ ಅಧ್ಯಾತ್ಮವನ್ನು ಬೋಧಿಸುತ್ತಾರೆ. ಶ್ರೀಕೃಷ್ಣನಂತೆಯೇ ಎಲ್ಲ ಕೆಲಸಗಳನ್ನೂ ಭಗವತ್‌ಕೇಂದ್ರಿತವನ್ನಾಗಿ ಮಾಡುವ ವಿಧಾನವನ್ನು ಶ್ರೀರಾಮಕೃಷ್ಣರೂ ಅತ್ಯಂತ ಸರಳವಾಗಿ ಉಪದೇಶಿಸುತ್ತಾರೆ.

ಶ್ರೀಕೃಷ್ಣನಂತೆ, ಶ್ರೀರಾಮಕೃಷ್ಣರೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ, ಈ ಆಧುನಿಕ ಯುಗದ ಆವಶ್ಯಕತೆಗೆ ಅನುಸಾರವಾಗಿ 'ಧರ್ಮಸಂರಕ್ಷಣೆ'ಯನ್ನು ಮಾಡಿದರು. ಸ್ವಾಮಿ ವಿವೇಕಾನಂದರು ಹೇಳುವಂತೆ ಅವರು ನಾಶಪಡಿಸಿದ ರಾಕ್ಷಸನಿಗೆ ಭೌತಿಕ ರೂಪವೇನೂ ಇರಲಿಲ್ಲ, ಅದಕ್ಕೆ ಬದಲಾಗಿ ಅವನು ಜನಮಾನಸದಲ್ಲಿ ವಿಷವೃಕ್ಷದಂತೆ ಹಬ್ಬಿದ್ದ 'ಸಂಶಯರಾಕ್ಷಸ'ನಾಗಿದ್ದ. ಹಿಂದೂಧರ್ಮವೆಂಬ ಪ್ರಾಚೀನ ಕಟ್ಟಡದ ರಚನೆಗಳು ಸಡಿಲವಾಗುತ್ತಿದ್ದ ಸಂದಿಗ್ಧಕಾಲದಲ್ಲಿ ತಮ್ಮ ತಪೋಬಲದಿಂದ, ಆಧ್ಯಾತ್ಮಿಕ ಶಕ್ತಿಯಿಂದ ಅದನ್ನು ಸಶಕ್ತಗೊಳಿಸಿ, ಮೇರುಸೌಧವನ್ನೇ ಕಟ್ಟಿದವರು ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು. ಇದು ಶ್ರೀಕೃಷ್ಣನು ದ್ವಾಪರಯುಗದಲ್ಲಿ ಮಾಡಿದ ದಿವ್ಯಕಾರ್ಯಕ್ಕಿಂತ ಎಳ್ಳಷ್ಟೂ ಕಡಮೆಯಾದದ್ದಲ್ಲ ಎಂದು ನಾವು ತಿಳಿದುಕೊಳ್ಳಬೇಕು.

ಶ್ರೀಕೃಷ್ಣ ತನ್ನ ಭಗವದ್ಗೀತೆಯಲ್ಲಿ ಯಜ್ಞಭಾವನೆಗೆ ಒತ್ತುಕೊಡುತ್ತಾನೆ. ಪರಸ್ಪರ ಸಹಕಾರ, ಕೊಡುಕೊಳ್ಳುವಿಕೆ, ತ್ಯಾಗ ಮತ್ತು ಸೇವೆ – ಇವೇ ಆ ಆದರ್ಶದ ಪ್ರಧಾನ ಅಂಶಗಳು. ಈ ಆಧುನಿಕ ಕಾಲದಲ್ಲಿ ಈ ಸರ್ವೋದಯ ಪರಿಕಲ್ಪನೆಗೆ ಆಧ್ಯಾತ್ಮಿಕ ಆಯಾಮವನ್ನು ನೀಡಿ ಅದನ್ನು ಸಾರ್ವತ್ರೀಕರಿಸಿದವರು ಶ್ರೀರಾಮಕೃಷ್ಣರು. **ಶಿವಜ್ಞಾನೇ ಜೀವ ಸೇವಾ** – ಶಿವನೆಂದು ಕಂಡು ಜೀವಿಗಳ ಸೇವೆ ಮಾಡಬೇಕು ಎಂಬ ಅವರ ಉದ್ಗಾರವು, ಮೇಲುನೋಟಕ್ಕೆ ಸರಳವೆನಿಸಿದರೂ, ಗಾಢ ಸಾಮಾಜಿಕ ಮತ್ತು ಆಧ್ಯಾತ್ಮಿಕ ಪರಿಣಾಮಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಹಿಂದೂ ಸಂಪ್ರದಾಯವು ಕೇವಲ ವ್ಯಕ್ತಿಪ್ರಧಾನವಾಗಿದ್ದ ಮತ್ತು ಬರಡು ನಂಬಿಕೆಗಳ ಕಂತೆಯಾಗಿದ್ದ ಧರ್ಮದ ಪರಿಕಲ್ಪನೆಯನ್ನು ಆಗಿನ ಕಾಲದಲ್ಲಿ ನೆಚ್ಚಿಕೊಂಡಿತ್ತು. ಅದನ್ನು ನಿರಾಕರಿಸುವ ಪರಿವರ್ತನಾಭಿಮುಖ ಕ್ರಾಂತಿಯ ಭಾವನೆ ಶ್ರೀರಾಮಕೃಷ್ಣರಲ್ಲಿ ಎದ್ದುತೋರುತ್ತದೆ. ಯಜ್ಞ ಮತ್ತು ಹೋಮಗಳ ಆಚರಣೆಯೇ ಎಲ್ಲವೂ ಆಗಿದ್ದ ತನ್ನ ಕಾಲದ ಕಳೆಗುಂದಿದ್ದ ವೈದಿಕ ಸಂಪ್ರದಾಯದ ವಿರುದ್ಧ, ಶ್ರೀಕೃಷ್ಣನೂ ಇಂಥದೇ ಕ್ರಾಂತಿಕಹಳೆಯನ್ನು ಊದಿದನೆಂಬುದನ್ನು ನಾವು ಮರೆಯಬಾರದು. ಭಗವದ್ಗೀತೆಯಲ್ಲಿ ಕಂಡುಬರುವ ಯಜ್ಞಭಾವನೆಯು, ಸಾಂಪ್ರದಾಯಿಕ ಯಾಗ–ಹೋಮಗಳಿಗೆ ಸಾರ್ವತ್ರಿಕವಾದ, ಸಮಾಜಮುಖಿಯಾದ, ವಿಶ್ವಾತ್ಮಕವಾದ ವ್ಯಾಪ್ತಿ ಮತ್ತು ಆಯಾಮಗಳನ್ನು ತಂದುಕೊಡುತ್ತದೆ. ಇದೇ ಘನಕಾರ್ಯವನ್ನು ಶ್ರೀರಾಮಕೃಷ್ಣರು ತಮ್ಮ ಸೇವಾತತ್ತ್ವದ ಬೋಧನೆಯಲ್ಲಿಯೂ ಮಾಡಿದರೆಂಬುದು ನಿಸ್ಸಂದಿಗ್ಧ. ಹೀಗೆ ಶ್ರೀಕೃಷ್ಣನ ರೀತಿಯಲ್ಲಿಯೇ ಶ್ರೀರಾಮಕೃಷ್ಣರೂ ಒಬ್ಬ ಕ್ರಾಂತಿಕಾರಿ ಅವತಾರಪುರುಷರಾಗಿ ಇತಿಹಾಸದ ಪುಟಗಳಲ್ಲಿ ವಿಜೃಂಭಿಸುತ್ತಾರೆ.

### ವಿವೇಕಾನಂದರು ಕಂಡ ಶ್ರೀರಾಮಕೃಷ್ಣ

ಸ್ವಾಮಿ ವಿವೇಕಾನಂದರು **'ಆಚಂಡಾಲಾ...'** ಎಂದು ಆರಂಭವಾಗುವ ಸ್ತೋತ್ರವೊಂದನ್ನು ರಚಿಸಿದ್ದಾರೆ. ಅದರ ಮೊದಲ ಶ್ಲೋಕದಲ್ಲಿ ಶ್ರೀರಾಮಾವತಾರದ ಮಹಿಮೆಯನ್ನು ಹೀಗೆ ವರ್ಣಿಸುತ್ತಾರೆ: "ಯಾರ ಪ್ರೇಮಪ್ರವಾಹವು ಚಂಡಾಲನವರೆಗೂ ತಡೆಯಿಲ್ಲದೆ ಹರಿಯುತ್ತಿತ್ತೋ, ಯಾರು ಲೋಕವನ್ನು ಮೀರಿದವನಾಗಿದ್ದರೂ ಲೋಕಕಲ್ಯಾಣಕ್ಕಾಗಿ ಶ್ರಮಿಸಿದನೋ, ಯಾರ ಮಹಿಮೆಗೆ ಮೂರು ಲೋಕಗಳಲ್ಲಿಯೂ ಸಾಟಿಯಿಲ್ಲವೋ, ಯಾರು ಜಾನಕಿಯ ಪ್ರಾಣಾಧಾರನೋ, ಯಾರ ಜ್ಞಾನರೂಪ ಶರೀರವು ಭಕ್ತಿರೂಪಳಾದ ಸೀತೆಯಿಂದ ಆವೃತವಾಗಿತ್ತೋ ಅಂಥ ರಾಮನು." ಮೇಲಿನ ಪಂಕ್ತಿಗಳು ಶ್ರೀರಾಮಾವತಾರದ ಉದ್ದೇಶವನ್ನೂ, ಶ್ರೀರಾಮನ ವ್ಯಕ್ತಿತ್ವದ ಮಾನುಷಿಕ ಮತ್ತು ದೈವಿಕ ಆಯಾಮಗಳನ್ನೂ ಓಜಸ್ವಿಯಾದ ಭಾಷೆಯಲ್ಲಿ ನಮಗೆ ಪರಿಚಯಿಸುತ್ತವೆ.

ಹಾಗೆಯೇ, ಇದೇ ಸ್ತೋತ್ರದ ಮುಂದಿನ ಶ್ಲೋಕದಲ್ಲಿ, ಸ್ವಾಮಿ ವಿವೇಕಾನಂದರು ಶ್ರೀಕೃಷ್ಣನ ಮಹಾನತೆಯನ್ನೂ ತಮ್ಮ ವೀರ್ಯವತ್ತಾದ ಶೈಲಿಯಲ್ಲಿ ಹೀಗೆ ಬಣ್ಣಿಸುತ್ತಾರೆ: "ಯಾರು ಪ್ರಲಯಕಾಲದ ಶಬ್ದದಂತೆ ಇದ್ದ ಕುರುಕ್ಷೇತ್ರ ಯುದ್ಧದ ಮಹಾಶಬ್ದವನ್ನು ಅಡಗಿಸಿಬಿಟ್ಟನೋ, ಅರ್ಜುನನ ಪ್ರಕೃತಿಸಹಜವಾದ ರಾತ್ರಿಯ ಅಂಧಕಾರದಂತೆ

ಇದ್ದ ಅಜ್ಞಾನವನ್ನು ಹೋಗಲಾಡಿಸಿದನೋ, ಶಾಂತವೂ ಮಧುರವೂ ಆಗಿದ್ದರೂ ಸಿಂಹನಾದದಂತೆ ಇದ್ದ ಭಗವದ್ಗೀತೆಯನ್ನು ಯಾವನು ಬೋಧಿಸಿದನೋ, ಅಂಥ ಪ್ರಸಿದ್ಧಪುರುಷನಾದ ಶ್ರೀಕೃಷ್ಣನು..." ಇದಕ್ಕಿಂತ ಹೆಚ್ಚು ಸಮಂಜಸವಾಗಿ, ಸಂಕ್ಷಿಪ್ತವಾಗಿ ಮತ್ತು ಸಮಗ್ರವಾಗಿ ಶ್ರೀಕೃಷ್ಣಾವತಾರದ ವೈಶಿಷ್ಟ್ಯವನ್ನು ಅಭಿವ್ಯಕ್ತಗೊಳಿಸುವ ವರ್ಣನೆ ಬೇರೊಂದಿರಲಾರದು.

ಮೂಲತಃ ಈ ಸ್ತೋತ್ರವು ಶ್ರೀರಾಮಕೃಷ್ಣರಿಗೆ ನಿವೇದಿತವಾದುದು. ಎರಡನೆಯ ಶ್ಲೋಕದ ಕಡೆಯ ಸಾಲಿನಲ್ಲಿ ಈ ಮಾತಿದೆ: **ಸೋಽಯಂ ಜಾತಃ ಪ್ರಥಿತಪುರುಷೋ ರಾಮಕೃಷ್ಣಸ್ತ್ವಿದಾನೀಮ್**– ಮೇಲೆ ವಿವರಿಸಿದ ಶ್ರೀರಾಮ ಮತ್ತು ಶ್ರೀಕೃಷ್ಣನೇ ಈಗ ಶ್ರೀರಾಮಕೃಷ್ಣನಾಗಿ ಅವತರಿಸಿದ್ದಾನೆ.

ಇದು ಸ್ವಾಮಿ ವಿವೇಕಾನಂದರ ದೃಢವಾದ ನಂಬಿಕೆ. ಇದು ಬರಿಯ ಬರಡು ನಂಬಿಕೆಯಲ್ಲ. ನಿಶ್ಚಯ ಪೂರ್ವಕವಾದ ವಿಶ್ವಾಸ. ತಮ್ಮ ಯೌವನದ ದಿನಗಳಲ್ಲಿ ಸ್ವಾಮೀಜಿ ಯಾವುದನ್ನೂ ಒಮ್ಮೆಲೇ ಒಪ್ಪಿಕೊಳ್ಳುತ್ತಿರಲಿಲ್ಲ. ವೈಚಾರಿಕತೆಯ ಒರೆಗಲ್ಲಿಗೆ ತಿಕ್ಕಿ ಎಲ್ಲವನ್ನೂ ಪರೀಕ್ಷಿಸುತ್ತಿದ್ದರು. ಅದರಂತೆಯೇ ಶ್ರೀರಾಮಕೃಷ್ಣರು ಅವತಾರಪುರುಷರೆಂಬ ವಿಷಯದಲ್ಲಿಯೂ ಅವರಿಗೆ ಸಂದೇಹ ಇದ್ದೇ ಇತ್ತು. ಶ್ರೀರಾಮಕೃಷ್ಣರು ತಮ್ಮ ಕಡೆಗಾಲದಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ನರಳುತ್ತಿದ್ದಾಗಲೂ, ಅವರು ಈ ಸಂದೇಹದಿಂದ ಮುಕ್ತರಾಗಿರಲಿಲ್ಲ. "ಇಂಥ ಜೀರ್ಣಸ್ಥಿತಿಯಲ್ಲಿಯೂ ಇವರು ತಮ್ಮನ್ನು ಅವತಾರ ಎಂದುಕೊಳ್ಳುತ್ತಾರೆಯೇ" ಎಂಬ ಸಂದೇಹ ಯುವಕ ನರೇಂದ್ರನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಒಡನೆಯೇ ಆತನ ಮನದಾಳದ ಭಾವವನ್ನು ಅರಿತುಕೊಂಡ ಶ್ರೀರಾಮಕೃಷ್ಣರು ನಿಸ್ಸಂದಿಗ್ಧವಾಗಿ ಹೇಳಿಯೇಬಿಟ್ಟರು: "ಯಾರು ರಾಮನೋ, ಯಾರು ಕೃಷ್ಣನೋ, ಅವನೇ ಈಗ ರಾಮಕೃಷ್ಣನಾಗಿ ಬಂದಿದ್ದಾನೆ. ಆದರೆ ನಿನ್ನ ವೇದಾಂತ ದೃಷ್ಟಿಯಿಂದಲ್ಲ."

ಶ್ರೀರಾಮಕೃಷ್ಣರ ಈ ಮಾತು ಅತ್ಯಂತ ಮಹತ್ವಪೂರ್ಣವಾದುದು. ಶ್ರೀರಾಮಕೃಷ್ಣರಲ್ಲಿ, ಶ್ರೀರಾಮ ಮತ್ತು ಶ್ರೀಕೃಷ್ಣರ ವ್ಯಕ್ತಿತ್ವಗಳು ಮಿಳಿತಗೊಂಡಿವೆ ಎಂಬುದನ್ನು ಯಾವ ಸಂದೇಹವೂ ಇಲ್ಲದೆ, ತಿಳಿಹೇಳುವ ಘೋಷವಾಕ್ಯವಿದು. ಅದಲ್ಲದೆ ಈ ಮಾತಿಗೆ ತಾತ್ತ್ವಿಕವಾದ ಆಯಾಮವೂ ಇದೆ. ಸಗುಣ ಬ್ರಹ್ಮ ಅಥವಾ ಈಶ್ವರನಿಗೆ ಮಾತ್ರ ಅವತಾರ ಸಾಧ್ಯ; ಅದ್ವೈತ ವೇದಾಂತದ ದೃಷ್ಟಿಯಿಂದ ಎಲ್ಲರೂ ಆತ್ಮಸ್ವರೂಪರೇ. ಭಗವತ್ತತ್ತ್ವದ ಸಗುಣ ಮತ್ತು ನಿರ್ಗುಣ ರೂಪಗಳ ವಿಷಯದಲ್ಲಿ ಗೊಂದಲಕ್ಕೆ ಆಸ್ಪದವಿಲ್ಲ. ಏಕೆಂದರೆ, ನಿರ್ಗುಣ ಭಾವನೆಯೇ ಸಗುಣ ಭಾವನೆಯಾಗಿ ತೋರುತ್ತದೆ. ಆ ಸಗುಣ ಭಾವನೆಯೇ ಅವತಾರವಾಗಿ ತೋರುತ್ತದೆ. ಹೀಗೆ ಒಂದು ದೊಡ್ಡ ತಾತ್ತ್ವಿಕ ಸಮಸ್ಯೆಯನ್ನು ಶ್ರೀರಾಮಕೃಷ್ಣರು ಬಹು ಸುಲಭವಾಗಿ, ತಮ್ಮ ಮೇಲಿನ ಮಾತಿನ ಮೂಲಕ ಪರಿಹರಿಸುತ್ತಾರೆ.

### ಉಪಸಂಹಾರ

ಸ್ವಾಮಿ ವಿವೇಕಾನಂದರು, 'ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣ' ಎಂಬ ಸೊಗಸಾದ ಪ್ರಬಂಧವೊಂದನ್ನು ಬರೆದಿದ್ದಾರೆ. ಅದರಲ್ಲಿ ಶ್ರೀರಾಮಕೃಷ್ಣಾವತಾರದ ಗರಿಮೆಯನ್ನು ಅತ್ಯಂತ ಓಜಸ್ವೀ ಭಾಷೆಯಲ್ಲಿ ಎತ್ತಿಹೇಳುತ್ತಾರೆ. ಅದಲ್ಲದೆ, ಈ ನವಯುಗದ ಆದರ್ಶದ ಬೆಳಕಿನಲ್ಲಿ ನಮ್ಮನ್ನು ನಾವು ಉದ್ಧರಿಸಿಕೊಳ್ಳಲು ಆಹ್ವಾನವನ್ನೂ ನೀಡುತ್ತಾರೆ. ಈ ಮಂತ್ರರೂಪೀ ಮಾತುಗಳೇ ನಮ್ಮ ಈ ವಿಶ್ಲೇಷಣೆಗೆ ಅತ್ಯಂತ ಸಮಂಜಸವಾದ ಉಪಸಂಹಾರ ವಾಗುತ್ತವೆ: "ಕರುಣಾಮಯನಾದ ಭಗವಂತನು ಹಿಂದಿನ ಎಲ್ಲ ಯುಗಗಳಿಗಿಂತಲೂ ಹೆಚ್ಚು ಪೂರ್ಣರೂಪದಲ್ಲಿ ಈಗ ಅವತರಿಸಿರುವನು. ಎಲ್ಲ ಆಧ್ಯಾತ್ಮಿಕ ಭಾವಗಳನ್ನು ಪ್ರಕಾಶಪಡಿಸುತ್ತ, ಸರ್ವವಿದ್ಯೆಗಳಿಗೆ ಸಹಾಯ ಮಾಡುತ್ತ ಸಮಾಜದ ಸರ್ವಾಂಗೀಣ ಪ್ರಗತಿಗೆ ಆಸ್ಪದ ಮಾಡಿರುವನು.... ಈ ನವಯುಗಧರ್ಮವು ಇಡೀ ಜಗತ್ತಿಗೆ, ವಿಶೇಷವಾಗಿ ಭಾರತದ ಕಲ್ಯಾಣಕ್ಕೆ ತಳಹದಿಯಾಗಿರುವುದು. ಈ ನವಯುಗಪ್ರವರ್ತಕರಾದ ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಧರ್ಮಪ್ರವರ್ತಕರ ಸುಸಂಸ್ಕೃತ ಆವಿರ್ಭಾವ. ಎಲೈ ಮಾನವನೇ, ಇದರಲ್ಲಿ ವಿಶ್ವಾಸವಿಡು. ಇದನ್ನು ಗ್ರಹಿಸು.... ನಾವು ಪ್ರಭುವಿನ ದಾಸರು. ಅವನ ಪುತ್ರರು. ಅವನ ಲೀಲಾಸಹಾಯಕರು ಎಂದು ಭಾವಿಸಿ ಕಾರ್ಯಕ್ಷೇತ್ರಕ್ಕೆ ಧುಮುಕು." •